# ಯಮರೆ ಗ್ರಾಮ ಪಂಚಾಯಿತಿ ಕಾರ್ಯಾಲಯ

ಯಮರೆ ಗ್ರಾಮ, ಸರ್ಜಾಪುರ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ - 562125

ದಿನಾಂಕ :

ಸಂ: ಯಮರೆ/ಗ್ರಾ.ಪಂ/49/2025-26

ದಿನಾಂಕ-16/07/2025

## ನಿರಾಪೇಕ್ಷಣಾ ಪತ್ರ

ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಯಮರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ವಳಗೆರೆ ಕಲ್ಲಹಳ್ಳಿ ಗ್ರಾಮದ ಸರ್ವೇ ನಂ 32/4 ರಲ್ಲಿ 1 ಎಕರೆ 31.75 ಗುಂಟೆ, ಸರ್ವೇ ನಂ 32/1 ರಲ್ಲಿ 1 ಎಕರೆ 36 ಗುಂಟೆ, ಸರ್ವೇ ನಂ 129/1 ರಲ್ಲಿ 2 ಎಕರೆ 13 ಗುಂಟೆ, ಸರ್ವೇ ನಂ 129/2 ರಲ್ಲಿ 0 ಎಕರೆ 27 ಗುಂಟೆ, ಸರ್ವೇ ನಂ 130/1 ರಲ್ಲಿ 0 ಎಕರೆ 18 ಗುಂಟೆ, ಸರ್ವೇ ನಂ 130/2 ರಲ್ಲಿ 0 ಎಕರೆ 15 ಗುಂಟೆ, ಸರ್ವೇ ನಂ 130/3 ರಲ್ಲಿ 0 ಎಕರೆ 06 ಗುಂಟೆ, ಒಟ್ಟು 7 ಎಕರೆ 26.75 ಗುಂಟೆ ಜಮೀನು ಜಿಲ್ಲಾಧಿಕಾರಿಗಳವರಿಂದ ಭೂ ಪರಿವರ್ತನೆಯಾಗಿದ್ದು ಸದರಿ ಜಮೀನಿನ **ಮೆ ಪ್ರೇಸ್ಟೇಜ್ ಪ್ರಾಜೆಕ್ಟ್ಸ್ ಪ್ರೈ.ಲಿ ರವರು ವಸತಿ ಸಮುಚ್ಚಯ ನಿರ್ಮಿಸಲು ಉದ್ದೇಶಿಸಿರುತ್ತಾರೆ ಸದರಿಯವರು ಉದ್ದೇಶಿಸಿರುವ ವಸತಿ ಸಮುಚ್ಚಯಕ್ಕೆ** ಸದರಿಯವರು ಮೂಲಭೂತ ಸೌಕರ್ಯಗಳಾದ ರಸ್ತೆ, ನೀರು ಸರಬರಾಜು, ಒಳಚರಂಡಿ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸುವುದಕ್ಕೆ ನಮ್ಮ ಗ್ರಾಮ ಪಂಚಾಯತಿ ವತಿಯಿಂದ ಯಾವುದೇ ಆಕ್ಷೇಪಣೆ ಇರುವುದಿಲ್ಲ ಹಾಗೂ ಸದರಿ ಜಮೀನುಗಳ ಸುತ್ತ-ಮುತ್ತ 500 ಮೀ ನಲ್ಲಿ ಯಾವುದೇ ಕೊಳವೆ ಬಾವಿಯು ಇರುವುದಿಲ್ಲ.

ಸಕ್ಷಮ ಪ್ರಾಧಿಕಾರದ ಅನುಮೋದಿತ ನಕ್ಷೆಯಂತೆ ಉದ್ದೇಶಿತ ವಸತಿ ಕಾಮಗಾರಿಗಳು ಪೂರ್ಣಗೊಂಡ ನಂತರ ಗ್ರಾಮ ಪಂಚಾಯತಿಗೆ ಕಟ್ಟಬೇಕಾದ ವಿವಿಧ ತೆರಿಗೆಗಳನ್ನು ಹಾಗೂ ಕುಡಿಯುವ ನೀರಿಗೆ ಸಂಬಂದಪಟ್ಟಂತಹ ಹಣವನ್ನು ಸಂದಾಯ ಮಾಡಿದ ನಂತರ ಅವಶ್ಯವಿದ್ದಲ್ಲಿ ಈಗಿರುವ ನೀರಿನ ಮೂಲಗಳಿಂದ ಕುಡಿಯುವ ನೀರನ್ನು ಸರಬರಾಜು ಮಾಡಲಾಗುವುದೆಂದು ಈ ಮೂಲಕ ದೃಡೀಕರಿಸುತ್ತೇವೆ. ಕುಡಿಯುವ ನೀರಿನ ಸಮಸ್ಯೆಗಳು ಉದ್ಭವಿಸಿದಲ್ಲಿ ಸರಬರಾಜಿನಲ್ಲಿ ವ್ಯತ್ಯಾಸವಾದಲ್ಲಿ ಹಾಗೂ ಸಂಪೂರ್ಣ ಸ್ಥಗಿತಗೊಳಿಸಲಾಗುವುದೆಂದು ಕೂಡ ತಿಳಿಯತಕ್ಕದು.

**ಈ ವಸತಿ ಸಮುಚ್ಚಯ ಯೋಜನೆಗೆ** ಕುಡಿಯುವ ನೀರಿನ ಸಂಪರ್ಕ ನೀಡಲು ಯಾವುದೇ ಆಕ್ಷೇಪಣೆ ಇರುವುದಿಲ್ಲವೆಂದು ಈ ಮೂಲಕ ಸಂಬಂದಪಟ್ಟವರಿಗೆ ನಿರಾಪೇಕ್ಷಣಾ ಪತ್ರವನ್ನು ನೀಡಲಾಗಿದೆ.

ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಯಮರೆ ಗ್ರಾಮ ಪಂಚಾಯಿತಿ
ಸರ್ಜಾಪುರ ಹೋ॥ ಆನೇಕಲ್ ತಾ॥
ಬೆಂಗಳೂರು-562125